# ಪುಸ್ತಕ ವಿಮರ್ಶೆ

**ಡಾ. ಎಸ್ ಆನಂದಲಕ್ಷ್ಮಿ**

ಶಿಕ್ಷಣದ ಕುರಿತು ಲಭ್ಯವಿರುವ ಗ್ರಂಥಗಳ ಪಾಲಿಗೆ ಈ ಪುಸ್ತಕದ ಕೊಡುಗೆಯು ಅನನ್ಯವಾದದ್ದು. ಶಾಲೆಯಲ್ಲಿ ತಲೆದೋರುವ ಅನೇಕ ಪ್ರಶ್ನೆಗಳನ್ನು ಇದು ಮುಂದಿಡುತ್ತದೆ: ಪರೀಕ್ಷೆಗಳ ಕುರಿತ ಅತಿಯಾದ ನಿರೀಕ್ಷೆ, ವಿದ್ಯಾರ್ಥಿಗಳಿಗೆ ನೀಡಿದ ಕಾರ್ಯಯೋಜನೆಗಳ ತಿದ್ದುವಿಕೆ, ಅನಿವಾರ್ಯವಾದ ಸಿಬ್ಬಂದಿ ಸಭೆಗಳು, ವಿಶೇಷ ಅಗತ್ಯತೆಗಳಿರುವ ಮಕ್ಕಳನ್ನು ತರಗತಿಗಳಲ್ಲಿ ಒಳಗೊಳ್ಳುವುದು, ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದರಲ್ಲಿ ಪ್ರಾಂಶುಪಾಲರ ಪಾತ್ರ, ಎಲ್ಲ ವಿದ್ಯಾರ್ಥಿಗಳ ಪ್ರತಿಭೆಗಳನ್ನು ಹಾಗೂ ಆಸಕ್ತಿಗಳನ್ನು ಬೆಂಬಲಿಸುವುದು ಇತ್ಯಾದಿ. ಇದರಲ್ಲಿ ಪ್ರತಿಯೊಂದು ವಿಷಯವನ್ನು ಭಿನ್ನವಾಗಿ ನಿರೂಪಿಸಲಾಗಿದೆ; ಒಂದು ಪ್ರಕರಣವನ್ನು ಶಿಕ್ಷಕರೊಬ್ಬರ ಖಾಸಗಿ ಡೈರಿಯಲ್ಲಿನ ಟಿಪ್ಪಣಿ ಎಂಬಂತೆ, ಇನ್ನೊಂದು, ಮಗುವೊಂದರ ತಂದೆ ವಿದೇಶದಲ್ಲಿರುವುದರಿಂದ ಪೋಷಕರ ಮಧ್ಯೆ ನಡೆಯುವ ಮಿಂಚಂಚೆ –ಇ ಮೇಲ್ ಪತ್ರವ್ಯವಹಾರದಂತೆ, ಮತ್ತು ಮೂರನೆಯದು ಮಗು ಮತ್ತು ಅದರ ಆಪ್ತ ಸಲಹೆಗಾರರ ನಡುವೆ ನಡೆಯುವ ಸಂಭಾಷಣೆಯಂತೆ. ಲೇಖಕರು ಮುಚ್ಚುಮರೆಯಿಲ್ಲದೆ ಅಭಿವ್ಯಕ್ತಿಸಲು ಮತ್ತು ಈ ಪ್ರಕರಣಗಳಲ್ಲಿ ಒಳಗಿನವರಂತೆಯೇ ಭಾವಿಸಿಕೊಳ್ಳಲು ಈ ಬರವಣಿಗೆಯ ತಂತ್ರಗಳು ನೆರವಾಗುತ್ತವೆ. ಸಹಜವಾಗಿಯೇ ಈ ಎಲ್ಲ ಕಥನಗಳೂ ಕಲ್ಪನಾ ಸಾಮ್ರಾಜ್ಯದವು, ಆದರೆ ಸತತವಾಗಿ ಇವುಗಳಲ್ಲಿ ನೈಜ ಬದುಕಿನ ಸದ್ದು ಕೇಳುತ್ತದೆ.

ಒಡಹುಟ್ಟಿದವರಾಗಿರಲಿ, ನೆರೆಹೊರೆಯವರಾಗಲಿ ಅಥವಾ ಸಹಪಾಠಿಗಳಾಗಿರಲಿ, ಮಕ್ಕಳನ್ನು ರೂಪ, ಪ್ರತಿಭೆ ಅಥವಾ ಶಾಲಾ ಫಲಿತಾಂಶಕ್ಕೆ ಸಂಬಂಧಿಸಿದಂತೆ ಹೋಲಿಕೆ ಮಾಡುವುದು ನಮ್ಮ ಸಂಸ್ಕೃತಿಯಲ್ಲಿ ಸಾಮಾನ್ಯ ಎಂಬಂತಾಗಿದ್ದು, ಹೋಲಿಕೆ ಅನೇಕ ಬಾರಿ ದ್ವೇಷಭಾವನೆಯನ್ನು ಹುಟ್ಟಿಸುತ್ತದೆ ಎಂಬುದು ಜನರಿಗೆ ತಿಳಿದಿಲ್ಲ. ಕೆಲವೊಮ್ಮೆ ಪ್ರತಿಕೂಲ ಹೋಲಿಕೆಗಳು ಬದುಕಿನುದ್ದಕ್ಕೂ ಮನಸ್ಸಿನ ಮೇಲೆ ಗಾಯದ ಗುರುತುಗಳನ್ನು ಉಳಿಸಿಬಿಡುತ್ತವೆ. ಒಂದು ಸಿದ್ಧ ಮಾದರಿ ಅಂಟಿಕೊಂಡು ಬಿಡುತ್ತದೆ.

ತರಗತಿಯ ಸಾಧನೆಯಲ್ಲಿ ಮತ್ತು ವರ್ತನೆಯಲ್ಲಿ ಒಂದು ರೀತಿಯ ಏಕರೂಪತೆಯನ್ನು ಇಷ್ಟಪಡುವ ಶಿಕ್ಷಕರಿಗೆ ವಿಶೇಷ ಅವಶ್ಯಕತೆಗಳು ಅಥವಾ ವಿಶೇಷ ಸಹಜ ಸಾಮರ್ಥ್ಯಗಳು ಇರತಕ್ಕಂತಹ ಮಕ್ಕಳು ಆತಂಕ ಹುಟ್ಟಿಸುತ್ತಾರೆ. ಒಂದೆರಡು ಕಥನಗಳಲ್ಲಿ ಈ ಅಂಶವನ್ನೂ ಕೈಗೆತ್ತಿಕೊಂಡು ಉತ್ತರಿಸಲಾಗಿದೆ.

“ಕಲಿಕೆಯ ಜಾಡುಗಳು” ಎಂಬ ಪುಸ್ತಕದ ಎರಡನೆಯ ಭಾಗದಲ್ಲಿ, ಭಾಗ ಒಂದರಲ್ಲಿರುವ ಪ್ರಕರಣಗಳನ್ನು ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಪ್ರಾಂಶುಪಾಲರ ಆಯ್ದ ಗುಂಪುಗಳು ವಿವರವಾಗಿ ಚರ್ಚಿಸಿವೆ. ಮೊದಲಿಗೆ ಹೇಳಬೇಕಾದ ಸಂಗತಿಯೆಂದರೆ, ಈ ಪುಸ್ತಕದ ಲೇಖಕರುಗಳು ವೈವಿಧ್ಯಮಯ ಆಕರ್ಷಕ ಶೈಕ್ಷಣಿಕ ಹಿನ್ನೆಲೆ ಹೊಂದಿದ್ದಾರೆ. ಅವರು ಸಂವಾದಕ್ಕಾಗಿ ಆಹ್ವಾನಿಸುವ ವ್ಯಕ್ತಿಗಳೆಲ್ಲರೂ ಒಳ್ಳೆಯ ಅಭಿವ್ಯಕ್ತಿ ಸಾಮರ್ಥ್ಯವಿರುವವರು, ಆತ್ಮವೀಕ್ಷಣೆಯ ಶಕ್ತಿ ಇರುವವರು ಮತ್ತು ಬಿಚ್ಚು ಮನಸ್ಸಿನವರು.

ಮಕ್ಕಳನ್ನು ಮೌಲ್ಯಮಾಪನ ಮಾಡುವ ಪ್ರಕ್ರಿಯೆಗಳ ಬಗ್ಗೆ ಅಲ್ಲೊಂದು ಇಲ್ಲೊಂದು ಜಟಿಲ ಪ್ರಶ್ನೆಗಳನ್ನು, ಶರದ ಬೆಹಾರ್ ರವವರ ಮುನ್ನುಡಿಯನ್ನೂ ಒಳಗೊಂಡಂತೆ ಎತ್ತಲಾಗಿದೆ. ಆಗಿದ್ದೂ, ಮಕ್ಕಳಿಗೆ ವಿಧಿಸುವ ಮನೆಗೆಲಸಗಳ ಕುರಿತಾದ ಹಿಮ್ಮಾಹಿತಿ

ವ್ಯವಸ್ಥೆಯ ಬಗ್ಗೆ ಹೊಸ ತಾತ್ವಿಕತೆಯೊಂದು ಎತ್ತಿರುವ ಅಂಶಗಳೂ ಸೇರಿದಂತೆ ಮೌಲ್ಯಮಾಪನ ಪ್ರಕ್ರಿಯೆಗಳ ಕುರಿತಾಗಿ ಜಟಿಲವಾದ ಪ್ರಶ್ನೆಗಳನ್ನು ಎತ್ತಲಾಗಿದೆಯಾದರೂ, ಭಾರತದ ಶಾಲಾ ವ್ಯವಸ್ಥೆಗಳು ಏನನ್ನು, ಯಾವಾಗ, ಎಷ್ಟು ನಿಯತವಾಗಿ ಪರೀಕ್ಷಿಸಬೇಕು ಎಂಬ ಬಗ್ಗೆ, ಸಂಬಂಧಪಟ್ಟ ಹಂತಗಳಲ್ಲಿ ಮೌಲ್ಯಮಾಪನಗಳನ್ನು, ಹೇಗೆ ಪ್ರಮಾಣೀಕರಿಸಬೇಕು ಎಂಬ ಬಗ್ಗೆ ಕಾರ್ಯಸಾಧುವಾದ ಸೂತ್ರವನ್ನು ಹೊಂದಿಲ್ಲ. ಕೆಲವೊಂದು ತುಂಬಾ ಬೇಡಿಕೆಯಲ್ಲಿರುವ ಕೋರ್ಸುಗಳು ಮತ್ತು ಸಂಸ್ಥೆಗಳು ತಮ್ಮದೇ ಆದ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತವೆ, ತತ್ಪರಿಣಾಮವಾಗಿ ಆಕಾಂಕ್ಷಿಗಳು ಅವುಗಳನ್ನು ಚೆನ್ನಾಗಿ ಎದುರಿಸಲಾಗುವಂತೆ ತಯಾರು ಮಾಡಲಿಕ್ಕೆಂದು ಸಾವಿರಾರು ತರಬೇತಿ ಶಾಲೆಗಳು ತಲೆ ಎತ್ತಿವೆ. ವಿದ್ಯಾರ್ಥಿಯೊಬ್ಬನ ಸ್ವೋಪಜ್ಞವಾದಂಥ ಮತ್ತು ಸೃಜನಶೀಲವಾದಂಥ ಆಲೋಚನೆಯನ್ನು, ಪರೀಕ್ಷಾ ಪದ್ಧತಿಯ ಪರಿಧಿಯೊಳಗೆ ಗುರುತಿಸುವ ವಿಧಾನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ಮಾತ್ರ, ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ, ಹೊರಗಿರಬಹುದಷ್ಟೇ!

ಈ ಪುಟಗಳಲ್ಲಿ ನಾವು ಭೇಟಿಯಾಗುವ ಪಾತ್ರಧಾರಿಗಳೆಲ್ಲರೂ ಇಂಗ್ಲಿಷ್ ಭಾಷೆಯಲ್ಲಿ ನುರಿತಿರುವವರು, ಸರಾಗವಾಗಿ ಮಾತನಾಡಬಲ್ಲವರು. ಅವರು ಸ್ಥಿತಿವಂತ ಕುಟುಂಬಗಳಿಂದ ಬಂದವರಾಗಿದ್ದು ಹೆಚ್ಚು ಶುಲ್ಕ ವಿಧಿಸುವ, ಚೆನ್ನಾಗಿ ನಡೆಯುತ್ತಿರುವಂತಹ ಶಾಲೆಗಳನ್ನೇ ಹುಡುಕಿಕೊಳ್ಳುವಂತಹವರು. ಹೀಗಾಗಿ ನಾವು ಬಹಳಷ್ಟು ಮಾತನಾಡುವ “ಶಿಕ್ಷಣದ ಮಾಧ್ಯಮ”ವು ಇಲ್ಲಿ ಅದೃಶ್ಯವಾದ ಸಂಗತಿ, ಅಥವಾ ಚಾಲ್ತಿಯಲ್ಲಿರುವ ಒಂದು ನುಡಿಗಟ್ಟನ್ನು ಉಪಯೋಗಿಸಿ ಹೇಳಬೇಕೆಂದರೆ, “ಅದು ಕೋಣೆಯಲ್ಲಿರುವ ಆನೆ” (ಯಾರೂ ಮಾತನಾಡಲಿಚ್ಛಿಸದ ವಿವಾದಾತ್ಮಕ ವಿಷಯ). ಭಾರತದ ಶಾಲೆಗಳಲ್ಲಿನ ಬಹುತೇಕ ಮಕ್ಕಳಿಗೆ “ಆಂಗ್ಲ ಮಾಧ್ಯಮ” ಎಂಬುದು ಒಂದು ಮಂತ್ರದಂಡದಂತೆ. ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು (ಮಾತಾಡುವ ಇಂಗ್ಲಿಷ್) ಕಲಿಸುವ ತರಗತಿಗಳಿಗೆ ನಿರೀಕ್ಷಿತವಾಗಿಯೇ ಬಹಳ ಬೇಡಿಕೆ ಇದೆ, ಆದರೆ ಶಾಲೆಯ ಒಳಗೇ ಆಗಲೀ, ಹೊರಗೆ ಆಗಲೀ ನಿಜಕ್ಕೂ ಕೈಗೆಟುಕುವ, ತಕ್ಕುದಾದ ತರಗತಿಗಳು ಸುಲಭವಾಗಿ ಸಿಗುವುದಿಲ್ಲ. ಪ್ರಾಯಶಃ ವಿದ್ಯಾರ್ಥಿಗಳ ಸಂವಹನಾ ಕೌಶಲಗಳಿಗೆ ನೆರವು ನೀಡಲು ಬೇಸಿಗೆಯ ರಜದಲ್ಲಿ, ಭಾಷೆಯಲ್ಲಿ ಪ್ರಭುತ್ವ ಹೊಂದಿರುವ ವಿದ್ಯಾರ್ಥಿಗಳನ್ನು ಇದಕ್ಕಾಗಿ ನಿಯೋಜಿಸಿಕೊಳ್ಳಬೇಕೇನೋ. ಇದೊಂದು ಕಷ್ಟಸಾಧ್ಯವಾದ ಮಹತ್ವಾಕಾಂಕ್ಷೆಯ ಯೋಜನೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಮೊಬೈಲ್ ಫೋನ್‌ಗಳು ಮತ್ತು ಹೆಚ್ಚುತ್ತಿರುವ ವಿಭಿನ್ನ ರೀತಿಯ ಗ್ಯಾಜೆಟ್ಟುಗಳ ಇಂದಿನ ಜಗತ್ತಿನಲ್ಲಿ, ಎಳೆಯರು ಪುಸ್ತಕಗಳನ್ನು ಓದುವುದು ಪ್ರಪಂಚದ ಎಲ್ಲೆಡೆ ಅಪರೂಪದ ಚಟುವಟಿಕೆಯಾಗುತ್ತಿದೆ ಎಂದು ನಾನು ಕೇಳಿದ್ದೇನೆ. ಆದರೆ ಭಾಷೆಯ ಉಪಯೋಗಗಳನ್ನು ಮತ್ತು ನುಡಿಗಟ್ಟುಗಳನ್ನು ಗಳಿಸಿಕೊಳ್ಳಲು ಓದುವ ಹುಚ್ಚನ್ನು ಬೆಳೆಸಿಕೊಳ್ಳುವುದನ್ನು ಬಿಟ್ಟು, ಬೇರೆ ಮರ್ಗಗಳು ನನಗೆ ತಿಳಿದಿಲ್ಲ. ಇದು ಈ ಸಹಸ್ರಮಾನದ ಮಕ್ಕಳ ಪಾಲಿಗೆ ಆಯ್ಕೆ ಮಾಡಿಕೊಳ್ಳಲಾಗದೆ ಕೈಬಿಟ್ಟ ಹಾದಿಯಾಗಬಹುದು.

ಲೇಖಕರ ತಂಡಕ್ಕೆ ಅಭಿನಂದನೆ ಸಲ್ಲಿಸುವ ಮೂಲಕ ನಾನು ಈ ಕಿರು ವಿಮರ್ಶೆಯನ್ನು ಮುಗಿಸಲು ಇಚ್ಛಿಸುತ್ತೇನೆ. ಅವರು ದೈನಂದಿನ ಶಾಲಾ ಅನುಭವಗಳನ್ನು ಅಗತ್ಯ ವಿವರಗಳೊಂದಿಗೆ ಸಂಗ್ರಹಿಸಿ, ಚೆನ್ನಾಗಿ ಒಂದು ಕಡೆ ಜೋಡಿಸಿ ಮುಂದಿಡುತ್ತಾ ಅದಕ್ಕೊಂದು ನೈಜತೆಯ ಸ್ಪರ್ಶವನ್ನು ನೀಡಿದ್ದಾರೆ.

ಓದುಗರಿಗೆ ನನ್ನ ಸಲಹೆಯೆಂದರೆ, ಈ ಸಂಪುಟದ ಸವಿಯನ್ನು ಅನುಭವಿಸಿ, ವೇಗವಾಗಿ ಓದುವ ಓದುಗರು ನೀವಾದರೆ ಇನ್ನೂ ಒಳ್ಳೆಯದು.

***

ಇದನ್ನು ನೀವು ಅಂರ್ತಾಜಾಲದಲ್ಲಿ ಕೊಂಡುಕೊಳ್ಳಬಹುದು;

https://notionpress.com/read/teaching-tales-learning-trails

ಪುಸ್ತಕದ ಮುನ್ನೋಟ: : https://thinkingteacher.in/teaching-tales-learning-trails/

Kindal ED : https://www.amazon.in/dp/BO7GK4JQ4G

**ಡಾ. ಎಸ್. ಆನಂದಲಕ್ಷ್ಮಿ**: ಇವರು ಮದ್ರಾಸು ವಿಶ್ವವಿದ್ಯಾಲಯದ ಬ್ರಿನ್ ಮಾರ್ ಕಾಲೇಜಿನಿಂದ ಮತ್ತು ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಿಂದ ಪದವಿಗಳನ್ನು ಪಡೆದುಕೊಂಡಿದ್ದಾರೆ. ಚೆನ್ನೈ ನಗರದ ವಿದ್ಯಾಮಂದಿರ ಎಂಬ ಶಾಲೆಯ ನೇತೃತ್ವವನ್ನು ಕೆಲಕಾಲ ವಹಿಸಿಕೊಂಡ ನಂತರ ಲೇಡಿ ಇರ್ವಿನ್ ಕಾಲೇಜಿನಲ್ಲಿ (ದೆಹಲಿ ವಿಶ್ವವಿದ್ಯಾಲಯ) ಕೆಲಸ ಮಾಡಿದರು. ಅಲ್ಲಿ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದಂತೆ ಸ್ನಾತಕೋತ್ತರ ಕೋರ್ಸನ್ನು ಅಭಿವೃದ್ಧಿ ಪಡಿಸುವುದರೊಂದಿಗೆ ಅದನ್ನು ಅಲ್ಲಿ ಸ್ಥಾಪಿಸಿ ನಂತರ ಕಾಲೇಜಿನ ಮುಖ್ಯಸ್ಥರಾದರು. ಅವರು ಅಮೆರಿಕಾ ಮತ್ತು ಇಂಗ್ಲೆಂಡ್ ನಲ್ಲಿ ಸಮ್ಮೇಳನಗಳಿಗಾಗಿ ಬಹಳಷ್ಟು ಪ್ರವಾಸ ಮಾಡಿದ್ದಾರೆ. ದೆಹಲಿಯಲ್ಲಿ ಮತ್ತು ಅಹಮದಾಬಾದ್ ನ ಸೇವಾದಲ್ಲಿ ಸಂಚಾರಿ ಶಿಶುಪಾಲನ ಕೇಂದ್ರಗಳನ್ನು ನಡೆಸುವುದೂ ಸೇರಿದಂತೆ ಅನೇಕ ಸರ್ಕಾರೇತರ ಸಂಸ್ಥೆಗಳಿಗೆ ಸಲಹೆಗಾರರಾಗಿ ಕೆಲಸ ಮಾಡಿದ್ದಾರೆ. ಅವರನ್ನು ಇಲ್ಲಿ ಸಂಪರ್ಕಿಸಬಹುದು. anandalakshmy@gmail.com

ಅನುವಾದ: ಬಿ. ಆರ್. ಮಂಜುನಾಥ್ : ಪರಿಶೀಲನೆ: ನಾಗಮಣಿ ಎಸ್. ಎನ್.